ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ.,
ಮಂಗಳೂರು ಡೈರಿ ಆವರಣ, ಕುಲಶೇಖರ, ಮಂಗಳೂರು –575 005
ದೂರವಾಣಿ ಸಂಖ್ಯೆ: (0824) 2231515,
ಇ–ಮೇಲ್ : mddkmul@gmail.com
ವೆಬ್‌ಸೈಟ್: www.dkmul.com

ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ., ಕುಲಶೇಖರ, ಮಂಗಳೂರು 575 005

ನಂ:ದಕಹಾಒ:ಆಡಳಿತ: 311:41: 609 :2021–22 ದಿನಾಂಕ: 23–04–2021

## : ನೇಮಕಾತಿ ಪ್ರಕಟಣೆ :

ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟವು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ ಹಾಲನ್ನು ಸಂಗ್ರಹಿಸಿ, ಸಂಸ್ಕರಣೆ/ ವಿವಿಧ ಉತ್ಪನ್ನಗಳ ತಯಾರಿಕೆ ಮಾಡಿ 'ನಂದಿನಿ' ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಗ್ರಾಹಕರಿಗೆ ಒದಗಿಸುತ್ತಿದ್ದು, ಅದರ ಕಾರ್ಯಾಚರಣೆಯನ್ನು ಬಲಪಡಿಸಲು ಈ ಕೆಳಗೆ ನಮೂದಿಸಿದ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ಸಹಾಯಕ ವ್ಯವಸ್ಥಾಪಕರು (ಎಹೆಚ್/ಎಐ): ವೇತನ ಶ್ರೇಣಿ ರೂ. 52650–97100 – ಏಳು ಹುದ್ದೆಗಳು

| ಪ.ಜಾ | ಪ.ಪಂ | ಪ್ರ –I | ಪ್ರ–II(ಎ) | ಪ್ರ–II(ಬಿ) | ಪ್ರ–III(ಎ) | ಪ್ರ–III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಇತರೆ– 1 | – | ಮಹಿಳೆ – 1 | ಇತರೆ – 1 | ಮಹಿಳೆ – 1 | – | ಮಹಿಳೆ – 1 | ಗ್ರಾಮೀಣ – 1<br>ಮಹಿಳೆ – 1 |

**ಶೈಕ್ಷಣಿಕ ವಿದ್ಯಾರ್ಹತೆ** :ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪಶು ವೈದ್ಯಕೀಯ ವಿಜ್ಞಾನದಲ್ಲಿ B.V.Sc./ B.V.Sc & AH ಪದವೀಧರರಾಗಿರಬೇಕು.

2.ತಾಂತ್ರಿಕ ಅಧಿಕಾರಿ (ಡಿ.ಟಿ): ವೇತನ ಶ್ರೇಣಿ ರೂ.43100 – 83900 – ನಾಲ್ಕು ಹುದ್ದೆಗಳು.

| ಪ.ಜಾ | ಪ.ಪಂ | ಪ್ರ –I | ಪ್ರ–II(ಎ) | ಪ್ರ–II(ಬಿ) | ಪ್ರ–III(ಎ | ಪ್ರ–III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಗ್ರಾಮೀಣ –1 ಬಿ.ಎಸ್ಸಿ (ಡಿ.ಟಿ) ಅಥವಾ ಬಿ.ಟೆಕ್ (ಡಿ.ಟೆಕ್) | – | – | – | ಮಹಿಳೆ –1 ಬಿ.ಎಸ್ಸಿ (ಡಿ.ಟಿ) ಅಥವಾ ಬಿ.ಟೆಕ್ (ಡಿ.ಟೆಕ್) | – | – | ಗ್ರಾಮೀಣ– 1 ಬಿ.ಎಸ್ಸಿ (ಡಿ.ಟಿ) ಅಥವಾ ಬಿ.ಟೆಕ್ (ಡಿ.ಟೆಕ್)<br>ಯೋಜನಾ ನಿರಾಶ್ರಿತರು–1 (M.Sc. in Food Technology) |

**ಶೈಕ್ಷಣಿಕ ವಿದ್ಯಾರ್ಹತೆ** : ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ನೀಡಲಾಗುವ ಬಿ.ಎಸ್ಸಿ (ಡಿ.ಟಿ) ಅಥವಾ ಬಿ.ಟೆಕ್ (ಡಿ.ಟೆಕ್) ಅಥವಾ ಕೇಂದ್ರೀಯ ಆಹಾರ ಸಂಶೋಧನಾ ಸಂಸ್ಥೆಯಿಂದ (Central Food Technology Research Institution) ಎಂ.ಎಸ್ಸಿ ಇನ್ ಫುಡ್ ಟೆಕ್ನಾಲಜಿ (M.Sc. in Food Technology) ಪದವೀಧರರಾಗಿರಬೇಕು. ಕೇಂದ್ರೀಯ ಆಹಾರ ಸಂಶೋಧನಾ ಸಂಸ್ಥೆಯಿಂದ (Central Food Technology Research Institution) ಎಂ.ಎಸ್ಸಿ ಇನ್ ಫುಡ್ ಟೆಕ್ನಾಲಜಿ (M.Sc. in

ವ್ಯವಸ್ಥಾಪಕರು (ಆಡಳಿತ)

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ.,

Food Technology) ಪದವೀಧರರು ಲಭ್ಯವಿಲ್ಲದಿದ್ದಲ್ಲಿ ಬಿ.ಎಸ್ಸಿ (ಡೈರಿ ಟೆಕ್ನಾಲಜಿ) ಅಥವಾ ಬಿ.ಟೆಕ್ (ಡೈರಿ ಟೆಕ್ನಾಲಜಿ) ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

**3.ತಾಂತ್ರಿಕಾಧಿಕಾರಿ (ಪರಿಸರ ): ವೇತನ ಶ್ರೇಣಿ ರೂ. 43100 – 83900 – ಒಂದು ಹುದ್ದೆ**

| ಪ.ಜಾ | ಪ.ಪಂ | ಪ್ರ –I | ಪ್ರ –II(ಎ) | ಪ್ರ –II(ಬಿ) | ಪ್ರ –III(ಎ) | ಪ್ರ –III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| – | – | – | – | – | – | – | ಇತರೆ– 1 |

**ಶೈಕ್ಷಣಿಕ ವಿದ್ಯಾರ್ಹತೆ:** ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ B.E in Enviornment ಅಥವಾ B.E in Chemical ಅಥವಾ M.Sc. in Environment Science ಪದವೀಧರರಾಗಿರಬೇಕು.

**4.ತಾಂತ್ರಿಕ ಅಧಿಕಾರಿ (ಇಂಜಿನಿಯರಿಂಗ್): ವೇತನ ಶ್ರೇಣಿ ರೂ. 43100 – 83900 – ಒಂದು ಹುದ್ದೆ**

| ಪ.ಜಾ | ಪ.ಪಂ | ಪ್ರ –I | ಪ್ರ –II(ಎ) | ಪ್ರ –II(ಬಿ) | ಪ್ರ –III(ಎ) | ಪ್ರ –III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| – | – | ಇತರೆ– 1 | – | – | – | – | – |

**ಶೈಕ್ಷಣಿಕ ವಿದ್ಯಾರ್ಹತೆ:** ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ /ಬಿ.ಟೆಕ್ ಪದವೀಧರರಾಗಿರಬೇಕು.

**5.ವಿಸ್ತರಣಾಧಿಕಾರಿ ದರ್ಜೆ– III : ವೇತನ ಶ್ರೇಣಿ ರೂ. 33450-62600 - ಎಂಟು ಹುದ್ದೆಗಳು.**

**ಅ)ಹಾಲು ಉತ್ಪಾದಕರ ಸಹಕಾರ ಸಂಘದ ಅರ್ಹ ಕಾರ್ಯದರ್ಶಿಗಳಿಂದ : (ನಾಲ್ಕು ಹುದ್ದೆಗಳು)**

| ಪ.ಜಾ | ಪ.ಪಂ | ಪ್ರ–I | ಪ್ರ –II(ಎ) | ಪ್ರ –II(ಬಿ) | ಪ್ರ –III(ಎ) | ಪ್ರ–III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| – | – | | ಗ್ರಾಮೀಣ–1 | – | – | ಇತರೆ–1 | ಗ್ರಾಮೀಣ–1<br>ಮಹಿಳೆ–1 |

**ಶೈಕ್ಷಣಿಕ ವಿದ್ಯಾರ್ಹತೆ:** ಪದವೀಧರರಾಗಿದ್ದು ಅಂದರೆ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿಯೊಂದಿಗೆ (10+2+3) ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆ ಸಲ್ಲಿಸಿರಬೇಕು. ಪ್ರಸ್ತುತ ಒಂದು ವರ್ಷದಿಂದ ಸಂಘದ ಕಾರ್ಯದರ್ಶಿಯಾಗಿ ಸೇವೆಯಲ್ಲಿರಬೇಕು. **ಸಂಘದ ಕಾರ್ಯದರ್ಶಿಗಳಿಗೆ ಮೀಸಲಿಟ್ಟ ರಿಕ್ತ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಇತರ ಅಭ್ಯರ್ಥಿಗಳಿಂದ ಭರ್ತಿ ಮಾಡಿಕೊಳ್ಳಲಾಗುವುದು ಎಂಬ ಮಾಹಿತಿ ನಮೂದಿಸಲಾಗಿರುತ್ತದೆ**

**ಆ)ಇತರ ಅಭ್ಯರ್ಥಿಗಳಿಂದ : (ನಾಲ್ಕು ಹುದ್ದೆಗಳು)**

| ಪ.ಜಾ | ಪ.ಪಂ | ಪ್ರ–I | ಪ್ರ –II(ಎ) | ಪ್ರ –II(ಬಿ) | ಪ್ರ –III(ಎ) | ಪ್ರ–III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಅಂಗವಿಕಲ–1 | – | – | ಅಂಗವಿಕಲ–1 | – | – | – | ಮಹಿಳೆ– –1<br>ಮಾಜಿ ಸೈನಿಕ–1 |

**ಶೈಕ್ಷಣಿಕ ವಿದ್ಯಾರ್ಹತೆ :**ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಪದವಿಯಲ್ಲಿ ಪದವೀಧರರಾಗಿರಬೇಕು.

**ವ್ಯವಸ್ಥಾಪಕರು (ಆಡಳಿತ)**

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ.,
ಕುಲಶೇಖರ, ಮಂಗಳೂರು – 575 005

**6. ಡೈರಿ ಸೂಪರ್‌ವೈಸರ್ ದರ್ಜೆ– II : ವೇತನ ಶ್ರೇಣಿ ರೂ. 33450-62600 - ಐದು ಹುದ್ದೆಗಳು.**

| ಪ.ಜಾ | ಪ.ಪಂ | ಪ್ರ–I | ಪ್ರ –II(ಎ) | ಪ್ರ –II(ಬಿ) | ಪ್ರ –III(ಎ) | ಪ್ರ–III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಮಹಿಳೆ–1 (ಇ ಅಂಡ್ ಇ)<br>ಗ್ರಾಮೀಣ–1 (ಇಲೆಕ್ಟ್ರಿಕಲ್) | – | – | – | ಇತರೆ–1 (ಇ ಅಂಡ್ ಸಿ) | ಇತರೆ–1 (ಮೆಕ್ಯಾನಿಕಲ್) | ಇತರೆ–1 (ಸಿವಿಲ್) | – |

**ಶೈಕ್ಷಣಿಕ ವಿದ್ಯಾರ್ಹತೆ:** ಯಾವುದೇ ಅಂಗೀಕೃತ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಇಲೆಕ್ಟ್ರಿಕಲ್ / ಮೆಕ್ಯಾನಿಕಲ್ / ಸಿವಿಲ್ / ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ / ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ಸ್ ಇಂಜಿನಿಯರಿಂಗ್ ವಿಷಯಗಳಲ್ಲಿ ಡಿಪ್ಲೋಮಾದಲ್ಲಿ ತೇರ್ಗಡೆಯಾಗಿರಬೇಕು.

**7. ಅ)ಆಡಳಿತ ಸಹಾಯಕರು ದರ್ಜೆ–2– ವೇತನ ಶ್ರೇಣಿ ರೂ.27650–52650 – ಐದು ಹುದ್ದೆಗಳು.**

| ಪ.ಜಾ | ಪ.ಪಂ | ಪ್ರ–I | ಪ್ರ –II(ಎ) | ಪ್ರ –II(ಬಿ) | ಪ್ರ –III(ಎ) | ಪ್ರ–III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಗ್ರಾಮೀಣ–1 | – | – | ಮಹಿಳೆ–1 | ಇತರೆ–1 | – | – | ಗ್ರಾಮೀಣ–1<br>ಇತರೆ–1 |

**ಶೈಕ್ಷಣಿಕ ವಿದ್ಯಾರ್ಹತೆ:** ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿಯಲ್ಲಿ ಪದವೀಧರರಾಗಿರಬೇಕು

**ಆ)ಮಾರುಕಟ್ಟೆ ಸಹಾಯಕರು ದರ್ಜೆ–2 : ವೇತನ ಶ್ರೇಣಿ ರೂ.27650–52650 – ಐದು ಹುದ್ದೆಗಳು.**

| ಪ.ಜಾ | ಪ.ಪಂ | ಪ್ರ–I | ಪ್ರ –II(ಎ) | ಪ್ರ –II(ಬಿ) | ಪ್ರ –III(ಎ) | ಪ್ರ–III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಗ್ರಾಮೀಣ–1 | – | – | ಮಹಿಳೆ–1 | ಇತರೆ–1 | – | – | ಗ್ರಾಮೀಣ–1<br>ಇತರೆ–1 |

**ಶೈಕ್ಷಣಿಕ ವಿದ್ಯಾರ್ಹತೆ:** ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿಯಲ್ಲಿ ಪದವೀಧರರಾಗಿರಬೇಕು.

**8. ಕೆಮಿಸ್ಟ್ ದರ್ಜೆ–II, ವೇತನ ಶ್ರೇಣಿ ರೂ.27650–52650– ಹನ್ನೆರಡು ಹುದ್ದೆಗಳು**

| ಪ.ಜಾ | ಪ.ಪಂ | ಪ್ರ –I | ಪ್ರ –II(ಎ) | ಪ್ರ –II(ಬಿ) | ಪ್ರ –III(ಎ) | ಪ್ರ–III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಗ್ರಾಮೀಣ–1 (ಬಿ.ಎಸ್ಸಿ ಕೆಮಿಸ್ಟ್ರಿ) | – | – | ಮಹಿಳೆ–1 (ಬಿ.ಎಸ್ಸಿ ಕೆಮಿಸ್ಟ್ರಿ)<br>ಗ್ರಾಮೀಣ–1 (ಬಿ.ಎಸ್ಸಿ ಕೆಮಿಸ್ಟ್ರಿ) | ಇತರೆ–1 (ಬಿ.ಎಸ್ಸಿ ಕೆಮಿಸ್ಟ್ರಿ) | ಇತರೆ–1 (ಬಿ.ಎಸ್ಸಿ ಕೆಮಿಸ್ಟ್ರಿ) | ಇತರೆ–1 (ಬಿ.ಎಸ್ಸಿ ಕೆಮಿಸ್ಟ್ರಿ) | ಇತರೆ–1 (ಬಿ.ಎಸ್ಸಿ ಕೆಮಿಸ್ಟ್ರಿ)<br>ಮಹಿಳೆ–2 (ಬಿ.ಎಸ್ಸಿ ಕೆಮಿಸ್ಟ್ರಿ)<br>ಗ್ರಾಮೀಣ–2 (ಬಿ.ಎಸ್ಸಿ ಇನ್ ಮೈಕ್ರೋಬಯಾಲಜಿ)<br>ಮಾಜಿ ಸೈನಿಕ–1 (ಬಿ.ಎಸ್ಸಿ ಇನ್ ಮೈಕ್ರೋಬಯಾಲಜಿ) |

ವ್ಯವಸ್ಥಾಪಕರು (ಆಡಳಿತ)

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ
ಕುಲಶೇಖರ, ಮಂಗಳೂರು – 575 005

**ಶೈಕ್ಷಣಿಕ ವಿದ್ಯಾರ್ಹತೆ:** ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ರಸಾಯನಶಾಸ್ತ್ರ ವಿಷಯವನ್ನು ಐಚ್ಛಿಕ ವಿಷಯವಾಗಿ ಹೊಂದಿರುವ ವಿಜ್ಞಾನ ಪದವಿ ಬಿ.ಎಸ್ಸಿ ಅಥವಾ ಬಿ.ಎಸ್ಸಿ ಇನ್ ಮೈಕ್ರೋಬಾಯಾಲಜಿಯಲ್ಲಿ ಪದವೀಧರರಾಗಿರಬೇಕು. ಬಿ.ಎಸ್ಸಿ ಇನ್ ಮೈಕ್ರೋಬಾಯಾಲಜಿ ಪದವೀಧರರು ಲಭ್ಯವಿಲ್ಲದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಬಿ.ಎಸ್ಸಿ ಕೆಮಿಸ್ಟ್ರಿ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

**09 ಲೆಕ್ಕ ಸಹಾಯಕರು ದರ್ಜೆ–2 : ವೇತನ ಶ್ರೇಣಿ:ರೂ.27650–52650 – ಎರಡು ಹುದ್ದೆಗಳು**

| ಪ.ಜಾ | ಪ.ಪಂ | ಪ್ರ –I | ಪ್ರ –II(ಎ) | ಪ್ರ –II(ಬಿ) | ಪ್ರ –III(ಎ) | ಪ್ರ–III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಗ್ರಾಮೀಣ–1 | – | – | – | – | – | – | ಇತರೆ–1 |

**ಶೈಕ್ಷಣಿಕ ವಿದ್ಯಾರ್ಹತೆ :** ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಬಿ.ಕಾಂ/ಬಿಬಿಎಂ/ಬಿಬಿಎ ಪದವೀಧರರಾಗಿರಬೇಕು.

**10. ಕಿರಿಯ ತಾಂತ್ರಿಕರು (ಇಲೆಕ್ಟ್ರಿಷನ್) : ವೇತನ ಶ್ರೇಣಿ ರೂ.21400–42000 – ಆರು ಹುದ್ದೆಗಳು.**

| ಪ.ಜಾ | ಪ.ಪಂ | ಪ್ರ –I | ಪ್ರ –II(ಎ) | ಪ್ರ –II(ಬಿ) | ಪ್ರ –III(ಎ) | ಪ್ರ–III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಗ್ರಾಮೀಣ–1 | – | – | ಇತರೆ–2<br>ಮಾಜಿಸೈನಿಕ–1 | – | | ಗ್ರಾಮೀಣ–1 | ಗ್ರಾಮೀಣ –1 |

**ಶೈಕ್ಷಣಿಕ ವಿದ್ಯಾರ್ಹತೆ :** ಎಸ್.ಎಸ್.ಎಲ್. ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅದರೊಂದಿಗೆ ಯಾವುದೇ ಅಂಗೀಕೃತ ಕೈಗಾರಿಕಾ ತರಬೇತಿ ಸಂಸ್ಥೆ / ಕೇಂದ್ರಗಳಿಂದ ಇಲೆಕ್ಟ್ರಿಷನ್ ವಿಷಯದಲ್ಲಿ (ಇಂಜಿನಿಯರಿಂಗ್ ಟ್ರೇಡ್) ಎರಡು ವರ್ಷಗಳ ಐ.ಟಿ.ಐ (ನ್ಯಾಷನಲ್ ಟ್ರೇಡ್ ಸರ್ಟಿಫಿಕೇಟ್) ತೇರ್ಗಡೆಯಾಗಿರಬೇಕು ಮತ್ತು ಒಂದು ವರ್ಷದ ಶಿಶಿಕ್ಷು ತರಭೇತಿ ಹೊಂದಿರಬೇಕು.

**11. ಕಿರಿಯ ತಾಂತ್ರಿಕರು (ಎಂ.ಆರ್.ಎ.ಸಿ) : ವೇತನ ಶ್ರೇಣಿ ರೂ.21400–42000 – ಏಳು ಹುದ್ದೆಗಳು.**

| ಪ.ಜಾ | ಪ.ಪಂ | ಪ್ರ–I | ಪ್ರ –II(ಎ) | ಪ್ರ –II(ಬಿ) | ಪ್ರ –III(ಎ) | ಪ್ರ–III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಇತರೆ– 2 | ಗ್ರಾಮೀಣ–1 | ಗ್ರಾಮೀಣ–1 | – | ಗ್ರಾಮೀಣ–1 | – | – | ಅಂಗವಿಕಲ–1<br>ಮಹಿಳೆ–1 |

**ಶೈಕ್ಷಣಿಕ ವಿದ್ಯಾರ್ಹತೆ:** ಎಸ್.ಎಸ್.ಎಲ್. ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅದರೊಂದಿಗೆ ಯಾವುದೇ ಅಂಗೀಕೃತ ಕೈಗಾರಿಕಾ ತರಬೇತಿ ಸಂಸ್ಥೆ / ಕೇಂದ್ರಗಳಿಂದ ಎಂ.ಆರ್.ಎ.ಸಿ ವಿಷಯದಲ್ಲಿ (ಇಂಜಿನಿಯರಿಂಗ್ ಟ್ರೇಡ್) ಎರಡು ವರ್ಷಗಳ ಐ.ಟಿ.ಐ (ನ್ಯಾಷನಲ್ ಟ್ರೇಡ್ ಸರ್ಟಿಫಿಕೇಟ್) ತೇರ್ಗಡೆಯಾಗಿರಬೇಕು ಮತ್ತು ಒಂದು ವರ್ಷದ ಶಿಶಿಕ್ಷು ತರಭೇತಿ ಹೊಂದಿರಬೇಕು.

ವ್ಯವಸ್ಥಾಪಕರು (ಆಡಳಿತ)

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ.
ಕುಲಶೇಖರ, ಮಂಗಳೂರು – 575 005

ಕುಲಶೇಖರ ಮಂಗಳೂರು 575 005

**12. ಕಿರಿಯ ತಾಂತ್ರಿಕರು (ಇಲೆಕ್ಟ್ರಾನಿಕ್ಸ್ ಮೆಕ್ಯಾನಿಕ್) :ವೇತನ ಶ್ರೇಣಿ ರೂ.21400-42000 – ಆರು ಹುದ್ದೆಗಳು.**

| ಪ.ಜಾ | ಪ.ಪಂ | ಪ್ರವರ್ಗ-1 | ಪ್ರ -II(ಎ) | ಪ್ರ -II(ಬಿ) | ಪ್ರ -III(ಎ) | ಪ್ರ-III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಮಹಿಳೆ-2 | – | – | ಮಹಿಳೆ-1 | – | ಗ್ರಾಮೀಣ-1 | – | ಮಹಿಳೆ-1<br>ಮಾಜಿ ಸೈನಿಕ-1 |

**ಶೈಕ್ಷಣಿಕ ವಿದ್ಯಾರ್ಹತೆ :** ಎಸ್.ಎಸ್.ಎಲ್. ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅದರೊಂದಿಗೆ ಯಾವುದೇ ಅಂಗೀಕೃತ ಕೈಗಾರಿಕಾ ತರಬೇತಿ ಸಂಸ್ಥೆ / ಕೇಂದ್ರಗಳಿಂದ ಇಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ ವಿಷಯದಲ್ಲಿ (ಇಂಜಿನಿಯರಿಂಗ್ ಟ್ರೇಡ್) ಎರಡು ವರ್ಷಗಳ ಐ.ಟಿ.ಐ (ನ್ಯಾಷನಲ್ ಟ್ರೇಡ್ ಸರ್ಟಿಫಿಕೇಟ್) ತೇರ್ಗಡೆಯಾಗಿರಬೇಕು ಮತ್ತು ಒಂದು ವರ್ಷದ ಶಿಶಿಕ್ಷು ತರಭೇತಿ ಹೊಂದಿರಬೇಕು.

**13. ಕಿರಿಯ ತಾಂತ್ರಿಕರು (ಫಿಟ್ಟರ್): ವೇತನ ಶ್ರೇಣಿ ರೂ.21400-42000 – ಆರು ಹುದ್ದೆಗಳು.**

| ಪ.ಜಾ | ಪ.ಪಂ | ಪ್ರ-1 | ಪ್ರ -II(ಎ) | ಪ್ರ -II(ಬಿ) | ಪ್ರ -III(ಎ) | ಪ್ರ-III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| ಮಾಜಿ ಸೈನಿಕ-1 | – | – | ಗ್ರಾಮೀಣ-1 | – | – | – | ಮಹಿಳೆ-1<br>ಗ್ರಾಮೀಣ-1<br>ಕನ್ನಡ ಮಾಧ್ಯಮ-1<br>ಇತರೆ -1 |

**ಶೈಕ್ಷಣಿಕ ವಿದ್ಯಾರ್ಹತೆ :** ಎಸ್.ಎಸ್.ಎಲ್. ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅದರೊಂದಿಗೆ ಯಾವುದೇ ಅಂಗೀಕೃತ ಕೈಗಾರಿಕಾ ತರಬೇತಿ ಸಂಸ್ಥೆ / ಕೇಂದ್ರಗಳಿಂದ ಫಿಟ್ಟರ್ ವಿಷಯದಲ್ಲಿ (ಇಂಜಿನಿಯರಿಂಗ್ ಟ್ರೇಡ್) ಎರಡು ವರ್ಷಗಳ ಐ.ಟಿ.ಐ (ನ್ಯಾಷನಲ್ ಟ್ರೇಡ್ ಸರ್ಟಿಫಿಕೇಟ್) ತೇರ್ಗಡೆಯಾಗಿರಬೇಕು ಮತ್ತು ಒಂದು ವರ್ಷದ ಶಿಶಿಕ್ಷು ತರಭೇತಿ ಹೊಂದಿರಬೇಕು.

**14. ಕಿರಿಯ ತಾಂತ್ರಿಕರು (ವೆಲ್ಡರ್) : ವೇತನ ಶ್ರೇಣಿ ರೂ.21400-42000 – ಎರಡು ಹುದ್ದೆಗಳು.**

| ಪ.ಜಾ | ಪ.ಪಂ | ಪ್ರ-1 | ಪ್ರ -II(ಎ) | ಪ್ರ -II(ಬಿ) | ಪ್ರ -III(ಎ) | ಪ್ರ-III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| – | – | – | – | – | – | – | ಗ್ರಾಮೀಣ-2 |

**ಶೈಕ್ಷಣಿಕ ವಿದ್ಯಾರ್ಹತೆ :** ಎಸ್.ಎಸ್.ಎಲ್. ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅದರೊಂದಿಗೆ ಯಾವುದೇ ಅಂಗೀಕೃತ ಕೈಗಾರಿಕಾ ತರಬೇತಿ ಸಂಸ್ಥೆ / ಕೇಂದ್ರಗಳಿಂದ ವೆಲ್ಡರ್ ವಿಷಯದಲ್ಲಿ (ಇಂಜಿನಿಯರಿಂಗ್ ಟ್ರೇಡ್) ಎರಡು ವರ್ಷಗಳ ಐ.ಟಿ.ಐ (ನ್ಯಾಷನಲ್ ಟ್ರೇಡ್ ಸರ್ಟಿಫಿಕೇಟ್) ತೇರ್ಗಡೆಯಾಗಿರಬೇಕು ಮತ್ತು ಒಂದು ವರ್ಷದ ಶಿಶಿಕ್ಷು ತರಭೇತಿ ಹೊಂದಿರಬೇಕು.

**15.ಕಿರಿಯ ತಾಂತ್ರಿಕರು (ಬಾಯ್ಲರ್): ವೇತನ ಶ್ರೇಣಿ ರೂ.21400-42000 – ಮೂರು ಹುದ್ದೆಗಳು.**

| ಪ.ಜಾ | ಪ.ಪಂ | ಪ್ರ -1 | ಪ್ರ -II(ಎ) | ಪ್ರ -II(ಬಿ) | ಪ್ರ -III(ಎ) | ಪ್ರ-III(ಬಿ) | ಸಾಮಾನ್ಯ ಅರ್ಹತೆ |
|---|---|---|---|---|---|---|---|
| – | – | – | – | – | ಮಹಿಳೆ-1 | – | ಯೋಜನಾ ನಿರಾಶ್ರಿತರು-1<br>ಮಹಿಳೆ-1 |

ವ್ಯವಸ್ಥಾಪಕರು (ಆಡಳಿತ)

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ.
ಕುಲಶೇಖರ, ಮಂಗಳೂರು - 575 005

ಕುಲಶೇಖರ
ಮಂಗಳೂರು
575 005



ಶೈಕ್ಷಣಿಕ ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅದರೊಂದಿಗೆ ಕರ್ನಾಟಕ ಸರ್ಕಾರವು ನಡೆಸುವ ದ್ವಿತೀಯ ದರ್ಜೆ ಬಾಯ್ಲರ್ ಅಟೆಂಡೆಂಟ್ ಸರ್ಟಿಫಿಕೇಟ್ ಆಫ್ ಕಾಂಪಿಟೆನ್ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು.

| | |
|---|---|
| ಪ.ಜಾ | ಪರಿಶಿಷ್ಟ ಜಾತಿ |
| ಪ.ಪಂ | ಪರಿಶಿಷ್ಟ ಪಂಗಡ |
| ಪ್ರ–1 | ಪ್ರವರ್ಗ–1 |
| 2ಎ | ಪ್ರವರ್ಗ 2 ಎ |
| 2ಬಿ | ಪ್ರವರ್ಗ 2 ಬಿ |
| 3ಎ | ಪ್ರವರ್ಗ 3 ಎ |
| 3ಬಿ | ಪ್ರವರ್ಗ 3 ಬಿ |

| | |
|---|---|
| ಇ | ಇತರೆ ಅಭ್ಯರ್ಥಿ |
| ಮ | ಮಹಿಳಾ ಅಭ್ಯರ್ಥಿ |
| ಮಾ.ಸೈ | ಮಾಜಿ ಸೈನಿಕ ಅಭ್ಯರ್ಥಿ |
| ಗ್ರಾ | ಗ್ರಾಮೀಣ ಅಭ್ಯರ್ಥಿ |
| ಕ.ಮಾ | ಕನ್ನಡ ಮಾಧ್ಯಮ ಅಭ್ಯರ್ಥಿ |
| ಅಂ.ವಿ | ಅಂಗವಿಕಲ ಅಭ್ಯರ್ಥಿ |
| ಯೋ.ನಿ | ಯೋಜನಾ ನಿರಾಶ್ರಿತ ಅಭ್ಯರ್ಥಿ |

ಮಹಿಳೆ ಅಭ್ಯರ್ಥಿಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಹಿಳಾ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಅರ್ಹ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಗ್ರಾಮೀಣ/ಕನ್ನಡ ಮಾಧ್ಯಮ / ಯೋಜನಾ ನಿರಾಶ್ರಿತರು /ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

**ಸೂಚನೆಗಳು:**

- ಭಾರತೀಯ ನಾಗರಿಕನಾಗಿರತಕ್ಕದ್ದು.
- ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.
- ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಒಕ್ಕೂಟವು ಕಾಯ್ದಿರಿಸಿಕೊಂಡಿದೆ.
- ಒಕ್ಕೂಟದಲ್ಲಿ ಖಾಲಿ ಇರುವ ಈ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಂಬಂಧ ನೇಮಕಾತಿ ಪ್ರಕ್ರಿಯೆ ಪೂರ್ಣ ವಿವರವನ್ನು ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ಜಾಲತಾಣ (ವೆಬ್ ಸೈಟ್) www.dkmul.com ನಲ್ಲಿ ಲಭ್ಯವಿದ್ದು ಅಭ್ಯರ್ಥಿಗಳು ಕಡ್ಡಾಯವಾಗಿ ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸತಕ್ಕದ್ದು, ಇತರ ಮೂಲಗಳಿಂದ ಅಂದರೆ ಇ–ಮೇಲ್ ಅಥವಾ ಕೊರಿಯರ್ ಅಂಚೆ ಮೂಲಕ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಈ ಪ್ರಕಟಣೆಯಲ್ಲಿ ಪ್ರಕಟಿಸಲಾಗಿರುವ ಹುದ್ದೆಗಳ ಸಂಖ್ಯೆಯಲ್ಲಿ ಬದಲಾವಣೆ, ಹೆಚ್ಚು/ಕಡಿಮೆ ಮಾಡುವ ಹಕ್ಕನ್ನು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.

ವ್ಯವಸ್ಥಾಪಕರು (ಆಡಳಿತ)

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ.,
ಕುಲಶೇಖರ, ಮಂಗಳೂರು – 575 005

- ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು. ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಬಯಸಿದಲ್ಲಿ ಪ್ರತ್ಯೇಕವಾಗಿ ಶುಲ್ಕ ಮತ್ತು ಅರ್ಜಿಯನ್ನು ಸಲ್ಲಿಸುವುದು.
- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಲ್ಲಿ ಅಪೂರ್ಣ ಮಾಹಿತಿಗಳನ್ನು ನೀಡಿದ್ದಲ್ಲಿ ಅಂತಹ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳದೇ ತಿರಸ್ಕರಿಸಲಾಗುವುದು.
- ನಿಗದಿತ ಅರ್ಜಿ ಶುಲ್ಕ ಸಂದಾಯ ಮಾಡದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿಸಲಾಗುವುದಿಲ್ಲ.
- ಒಕ್ಕೂಟದಲ್ಲಿ ಈ ನೇಮಕಾತಿ ಪ್ರಕಟಣೆಯಲ್ಲಿ ನೀಡಿರುವ ಸೂಚನೆಗಳನ್ನು ಪೂರ್ಣವಾಗಿ ತಿಳಿಯದೇ ಅಭ್ಯರ್ಥಿಗಳು ತಪ್ಪೆಸಗಿದ್ದಲ್ಲಿ ಒಕ್ಕೂಟವು ಜವಾಬ್ದಾರರಾಗಿರುವುದಿಲ್ಲ.
- ಈ ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಅಂಚೆ ವಿಳಾಸ, ಮೊಬೈಲ್ ನಂಬ್ರ ಮತ್ತು ಇ-ಮೇಲ್ ಐಡಿಗಳ ಮೂಲಕವೇ ಸಂಪರ್ಕಿಸಲಾಗುವುದು.

**1. ವಯೋಮಿತಿ:**

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಕನಿಷ್ಠ ವಯೋಮಿತಿ – 18 ವರ್ಷಗಳು ಮತ್ತು ಗರಿಷ್ಠ ವಯೋಮಿತಿ: 1. **ಸಾಮಾನ್ಯ ಅರ್ಹತೆ** – 35 ವರ್ಷಗಳು. 2. **ಪ್ರವರ್ಗ** II-A, II-B, III-A ಮತ್ತು III-B – 38 ವರ್ಷಗಳು. 3. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 – 40 ವರ್ಷಗಳು.

- **ವಯೋಮಿತಿ ಸಡಿಲಿಕೆ:**

**ಅಂಗವಿಕಲರಿಗೆ ಮತ್ತು ವಿಧವೆಯರಿಗೆ** ವಯೋಮಿತಿಯಲ್ಲಿ **ಗರಿಷ್ಠ 10 ವರ್ಷಗಳ ಸಡಿಲಿಕೆ** ಇರುತ್ತದೆ. ಅಂಗವೈಕಲ್ಯವನ್ನು ಹೊಂದಿರುವ ಬಗ್ಗೆ ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರವನ್ನು ಅಪ್‌ಲೋಡ್ ಮಾಡಬೇಕು. ವಿಧವೆಯಾಗಿದ್ದಲ್ಲಿ, ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರದಿಂದ ತಾನು ವಿಧವೆಯೆಂದು ಹಾಗೂ ಮರುಮದುವೆಯಾಗಿರುವುದಿಲ್ಲವೆಂಬ ಪ್ರಮಾಣಪತ್ರವನ್ನು ಅಪ್‌ಲೋಡ್ ಮಾಡಬೇಕು. ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲಿ ಅವನು ಭಾರತೀಯ ಸಶಸ್ತ್ರ ದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳು. ಅಭ್ಯರ್ಥಿಯು ನ್ಯಾಷನಲ್ ಕೆಡೆಟ್ ಕಾರ್ಪ್ಸ್‌ನಲ್ಲಿ ಪೂರ್ಣಕಾಲಿಕ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂತಹ ಕೆಡೆಟ್ ಪರಿವೀಕ್ಷಕನಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು. ವಯೋಮಿತಿ ಸಡಿಲಿಕೆಯ ವಿನಾಯಿತಿ/ ರಿಯಾಯಿತಿ ಸೌಲಭ್ಯ ಪಡೆಯಲಿಚ್ಛಿಸುವವರು ಈ ಬಗ್ಗೆ ಅಗತ್ಯ ಪ್ರಮಾಣಪತ್ರದ ದಾಖಲೆಯನ್ನು ಅಪ್‌ಲೋಡ್ ಮಾಡಬೇಕು.

**2. ಆಯ್ಕೆ ವಿಧಾನ :**

ಕರ್ನಾಟಕ ಸಹಕಾರ ಸಂಘಗಳ ನಿಯಮ 1960 18(ಸಿ) ರಂತೆ ಹುದ್ದೆಗಳ ನೇಮಕಾತಿಗೆ ಲಿಖಿತ ಪರೀಕ್ಷೆಯನ್ನು ಏರ್ಪಡಿಸಲಾಗುವುದು. ಕನ್ನಡ ಭಾಷೆಗೆ 50 ಅಂಕಗಳು, ಸಾಮಾನ್ಯ ಇಂಗ್ಲೀಷ್‌ಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಗಳಿಗಾಗಿ 50 ಅಂಕಗಳು, ಭಾರತದ ಸಂವಿಧಾನ ವಿಷಯಕ್ಕಾಗಿ 25 ಅಂಕಗಳು ಹಾಗೂ ಸಂಸ್ಥೆಯ ಕಾರ್ಯಕ್ಷೇತ್ರ, ಉದ್ದೇಶ, ಕಾರ್ಯಚಟುವಟಿಕೆಗಳಿಗೆ 25 ಅಂಕಗಳನ್ನು ಒಳಗೊಂಡಿರುತ್ತದೆ. ಅರ್ಹ ಅಭ್ಯರ್ಥಿಗಳಿಗೆ ಮೇಲಿನಂತೆ ಒಟ್ಟು 200 ಅಂಕಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್.ಸಿ.ಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/41/2020 ದಿನಾಂಕ:16–09–2020ರಂತೆ ನಿಗದಿಯಾಗಿರುವ ಬಾಹ್ಯ ಮೂಲದ ಒಂದು ಸಂಸ್ಥೆಯಿಂದ ಲಿಖಿತ ಪರೀಕ್ಷೆ ನಡೆಸಲಾಗುವುದು.

ಸಹಕಾರಕ್ಕೆ ಸಂಬಂಧಪಟ್ಟ ವಿಷಯವು ಈ ಕೆಳಕಂಡ ಪಠ್ಯಕ್ರಮ ಒಳಗೊಂಡಿರುತ್ತದೆ.

ವ್ಯವಸ್ಥಾಪಕರು (ಆಡಳಿತ)

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರ ಹಾಲು ಉತ್ಪಾದಕರ ಒಕ್ಕೂಟ ನಿ.
ಕುಲಶೇಖರ, ಮಂಗಳೂರು – 575 005

i. ಸಹಕಾರ ಚಳುವಳಿಯ ಇತಿಹಾಸ.
ii. ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಸಂಘಗಳ ಪಾತ್ರ.
iii. ಸಹಕಾರ ಸಂಘಗಳ ರಚನೆ, ಆಡಳಿತ, ಕಾರ್ಯನಿರ್ವಹಣೆ ಮತ್ತು ಲೆಕ್ಕಪತ್ರ ನಿರ್ವಹಣೆ.
iv. ಸಹಕಾರ ತತ್ವಗಳು.
v. ಸಹಕಾರ ಸಂಘಗಳ ಕುರಿತಾದ ಭಾರತ ಸಂವಿಧಾನದ 97 ನೇ ತಿದ್ದುಪಡಿ ಮತ್ತು ಸಹಕಾರ ಸಂಘಗಳ ಕಾನೂನು.

ಪರೀಕ್ಷೆಯ ಪ್ರವೇಶ ಪತ್ರ, ದಿನಾಂಕ ಹಾಗೂ ಪರೀಕ್ಷೆಯ ಕಾಲಾವಧಿಯನ್ನು ಮತ್ತು ಪರೀಕ್ಷಾ ವಿಧಾನವನ್ನು ಅರ್ಹ ಅಭ್ಯರ್ಥಿಗಳಿಗೆ ಅಂಚೆ ಮೂಲಕ ಮತ್ತು ಎಸ್.ಎಂ.ಎಸ್ ಮೂಲಕ ತಿಳಿಸಲಾಗುವುದು. ಒಕ್ಕೂಟದ ವೆಬ್‌ಸೈಟ್‌ನಲ್ಲಿ ಲಿಖಿತ ಪರೀಕ್ಷೆ / ಸಂದರ್ಶನದ ಸ್ಥಳ, ದಿನಾಂಕ ಮತ್ತು ಸಮಯವನ್ನು ಪ್ರಕಟಿಸಲಾಗುವುದು. ಸದರಿ ಮಾಹಿತಿಯನ್ನು ಒಕ್ಕೂಟದ ವೆಬ್‌ಸೈಟ್ ಮೂಲಕ ತಿಳಿದುಕೊಳ್ಳುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

ಲಿಖಿತ ಪರೀಕ್ಷೆಯಲ್ಲಿ (Written Examination) ಗಳಿಸಿದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು ಪ್ರತಿ ಹುದ್ದೆಗೆ 1:5 ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು. ಮೌಖಿಕ ಸಂದರ್ಶನಕ್ಕೆ ಶೇಕಡ 15 ರಷ್ಟು ಅಂಕಗಳನ್ನು ನಿಗದಿಪಡಿಸಲಾಗಿದೆ. ಅಭ್ಯರ್ಥಿಯು ಲಿಖಿತ ಪರೀಕ್ಷೆಯಲ್ಲಿ ಗಳಿಸುವ ಅಂಕಗಳನ್ನು ಶೇ.85ಕ್ಕೆ ಇಳಿಸಿ, ಪ್ರಾಪ್ತವಾಗುವ ಅಂಕಗಳನ್ನು ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳನ್ನು ಕೂಡಿಸಿ ಪ್ರಾಪ್ತವಾಗುವ ಒಟ್ಟು ಅಂಕಗಳ ಆಧಾರದ ಮೇಲೆ ಅಂತಿಮ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುವುದು. ಅಭ್ಯರ್ಥಿಗಳ ಅಂತಿಮ ಅರ್ಹತಾ ಪಟ್ಟಿಯ ಆಧಾರದ ಮೇಲೆ ಮೀಸಲಾತಿ ನಿಯಮಗಳನ್ನು ಅನುಸರಿಸಿ ಅರ್ಹ ಅಭ್ಯರ್ಥಿಗಳನ್ನು ಅಂತಿಮವಾಗಿ ಆಯ್ಕೆ ಮಾಡಲಾಗುವುದು. ಅಭ್ಯರ್ಥಿಗಳ ಅರ್ಹತೆಯ ಬಗ್ಗೆ ಒಕ್ಕೂಟದ ನೇಮಕಾತಿ ಸಮಿತಿಯ ನಿರ್ಣಯವೇ ಅಂತಿಮವಾಗಿದ್ದು ಇದಕ್ಕೆ ಅಭ್ಯರ್ಥಿಯು ಬದ್ಧರಾಗಿರಬೇಕು.

ಈ ಹುದ್ದೆಗಳ ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನವನ್ನು ಮಂಗಳೂರಿನಲ್ಲಿ ನಡೆಸಲಾಗುವುದು. ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನಕ್ಕೆ ಪ್ರವೇಶ ಪತ್ರ/ ಕರೆಪತ್ರ ಪಡೆಯುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು. ಆಯ್ಕೆಯಾದ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನದ ದಿನಾಂಕವನ್ನು ತಿಳಿಸಲಾಗುವುದು. ಕಿರಿಯ ತಾಂತ್ರಿಕರು ಹುದ್ದೆಯನ್ನು ಹೊರತುಪಡಿಸಿ ಉಳಿಕೆ ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿ ಲಿಖಿತ ಪರೀಕ್ಷೆಗೆ ಅರ್ಹತೆ ಪಡೆದಲ್ಲಿ ಬೇರೆ ಬೇರೆ ಹುದ್ದೆಗಳಿಗೆ ಪ್ರತ್ಯೇಕ ಲಿಖಿತ ಪರೀಕ್ಷೆ ನಡೆಸಲಾಗುವುದಿಲ್ಲ. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳ ಮೌಖಿಕ ಸಂದರ್ಶನಕ್ಕೆ ಅರ್ಹತೆ ಪಡೆದಲ್ಲಿ ಎಲ್ಲಾ ಹುದ್ದೆಗಳಿಗೂ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಪರಿಗಣಿಸಲಾಗುವುದು.

ಅಭ್ಯರ್ಥಿಗಳು ಲಿಖಿತ ಪರೀಕ್ಷೆ ಮತ್ತು ಸಂದರ್ಶನಕ್ಕೆ ಹಾಜರಾದಾಗ ಅವರಿಗೆ ಕಳುಹಿಸಿದ ಲಿಖಿತ ಪರೀಕ್ಷೆ ಪ್ರವೇಶ ಪತ್ರ/ ಸಂದರ್ಶನ ಕರೆಪತ್ರ ಹಾಗೂ ಅವರ ಭಾವಚಿತ್ರವಿರುವ ಮೂಲ ಗುರುತಿನಚೀಟಿ (ಚುನಾವಣಾ ಐಡಿ/ ಆಧಾರ್‌ಕಾರ್ಡ್/ಡ್ರೈವಿಂಗ್ ಲೈಸನ್ಸ್/ ಪಾನ್‌ಕಾರ್ಡ್/ ಪಾಸ್‌ಪೋರ್ಟ್)ಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಹತೆ ಹೊಂದಿದ್ದ ಪಕ್ಷದಲ್ಲಿ, ಯಾವುದಾದರೂ ಒಂದು ಹುದ್ದೆಗೆ ಮಾತ್ರ ಪರಿಗಣಿಸಿ, ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು

**3. Scan ಮಾಡಿ ಅಪ್‌ಲೋಡ್ ಮಾಡಬೇಕಾದ ಪ್ರಮಾಣಪತ್ರಗಳು /ದಾಖಲೆಗಳು :**

**ಎ) ಜಾತಿ ಮೀಸಲಾತಿ ಪ್ರಮಾಣಪತ್ರಗಳು** : ಜಾತಿ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು –

**ವ್ಯವಸ್ಥಾಪಕರು (ಆಡಳಿತ)**

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ.
ಕುಲಶೇಖರ, ಮಂಗಳೂರು – 575 005

- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು – ನಮೂನೆ 'ಡಿ' ಯಲ್ಲಿ
- ಪ್ರವರ್ಗ I ರ ಅಭ್ಯರ್ಥಿಗಳು – ನಮೂನೆ ' ಇ' ಯಲ್ಲಿ ಹಾಗೂ
- ಪ್ರವರ್ಗ II-A, II-B, III-A ಮತ್ತು III-B ರ ಅಭ್ಯರ್ಥಿಗಳು – ನಮೂನೆ 'ಎಫ್' ನಲ್ಲಿ ಸಂಬಂಧಿತ ತಹಶೀಲ್ದಾರರಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಅಧಿಕೃತ ಪ್ರಮಾಣಪತ್ರವನ್ನು ಪಡೆದಿರಬೇಕು ಹಾಗೂ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು. ಅಂದರೆ, ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣಪತ್ರಗಳನ್ನು ಪಡೆದ ದಿನಾಂಕದಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದವರಗೆ ಐದು ವರ್ಷಗಳ ಅವಧಿಯಲ್ಲಿರಬೇಕು. ಈ ಪ್ರಮಾಣಪತ್ರಗಳ ನಮೂನೆಗಳನ್ನು ಈ ಪ್ರಕಟಣೆಯ ಕೊನೆಯಲ್ಲಿ ನೀಡಲಾಗಿರುತ್ತದೆ.
- ಜಾತಿ / ವರ್ಗ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಇದಕ್ಕೆ ಸಂಬಂಧಿಸಿದಂತೆ ಸರ್ಕಾರವು ನಿಗದಿಪಡಿಸಿರುವ ನಮೂನೆಗಳಲ್ಲಿ ಅಂದರೆ ಮೇಲೆ ತಿಳಿಸಿರುವ ನಮೂನೆಗಳಲ್ಲೇ ಪ್ರಮಾಣ ಪತ್ರವನ್ನು ಪಡೆದು ಅಪ್‌ಲೋಡು ಮಾಡತಕ್ಕದ್ದು. ವಿದ್ಯಾಭ್ಯಾಸ / ಶಿಕ್ಷಣಕ್ಕಾಗಿ / ಇತರೆ ಸರ್ಕಾರಿ ಸೌಲಭ್ಯಕ್ಕಾಗಿ ಅಥವಾ ಸಾಲಕ್ಕಾಗಿ ಪಡೆದಿರುವ ಜಾತಿ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದಿಲ್ಲ.

ಬಿ) ಗ್ರಾಮೀಣ ಅಭ್ಯರ್ಥಿ:

ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ 1 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಮೀಸಲಾತಿಯನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ I, II-A, II-B, III-A ಮತ್ತು III-B ರ ಅಭ್ಯರ್ಥಿಗಳು ನಮೂನೆ–2 ರಲ್ಲಿ ಗ್ರಾಮೀಣ ಮೀಸಲಾತಿ ಪ್ರಮಾಣಪತ್ರವನ್ನು ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ–2 ರ ಗ್ರಾಮೀಣ ಮೀಸಲಾತಿ ಪ್ರಮಾಣಪತ್ರದ ಜೊತೆಗೆ ನಮೂನೆ–1 ರಲ್ಲಿ ಅವರು ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪ್ರಮಾಣಪತ್ರವನ್ನು ಸಂಬಂಧಿತ ತಹಶೀಲ್ದಾರರಿಂದ ಪಡೆದು ಸಲ್ಲಿಸಬೇಕು. ಗ್ರಾಮೀಣ ಮೀಸಲಾತಿ ಪ್ರಮಾಣಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ. ನಮೂನೆ–2 ರ ಗ್ರಾಮೀಣ ಮೀಸಲಾತಿ ಪ್ರಮಾಣಪತ್ರವನ್ನು ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಅದಕ್ಕೆ ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಪಡೆದಿರತಕ್ಕದ್ದು.(ಅಭ್ಯರ್ಥಿಗಳ ನೇರ ಮೀಸಲಾತಿ ಪ್ರಮಾಣಪತ್ರಗಳು ತಿರಸ್ಕೃತಗೊಂಡಲ್ಲಿ ಅಂತಹವರು ಗ್ರಾಮೀಣ ಮೀಸಲಾತಿಗೆ ಸಹ ಅನರ್ಹರಾಗುತ್ತಾರೆ.)

ಸಿ)ಅಂಗವಿಕಲ ಅಭ್ಯರ್ಥಿ:

ಅಂಗವಿಕಲ ಮೀಸಲಾತಿಯಡಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಸಕ್ಷಮ ವೈದ್ಯಕೀಯ ಪ್ರಾಧಿಕಾರದಿಂದ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು. ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಅಂಗವಿಕಲ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು/ ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ. (ಈ ಪ್ರಮಾಣ ಪತ್ರದ ನಮೂನೆಯನ್ನು ನೇಮಕಾತಿ ಪ್ರಕಟಣೆಯ ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿದೆ.)

**ಡಿ) ಕನ್ನಡ ಮಾಧ್ಯಮ ಅಭ್ಯರ್ಥಿ :**

ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಯಮಗಳ ರೀತ್ಯ 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ಕನ್ನಡ

ವ್ಯವಸ್ಥಾಪಕರು (ಆಡಳಿತ)

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ.
ಕುಲಶೇಖರ, ಮಂಗಳೂರು – 575 005

ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ, ಜಾರಿ ದಿನಾಂಕ ಹಾಗೂ ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಕ.ಮಾ.ಅ. ಮೀಸಲಾತಿಯನ್ನು ರದ್ದುಪಡಿಸಲಾಗುವುದು (ಈ ಪ್ರಮಾಣ ಪತ್ರದ ನಮೂನೆಯನ್ನು ನೇಮಕಾತಿ ಪ್ರಕಟಣೆಯ ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿದೆ).

**ಇ) ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ (PDP) :**

ಚಾಲ್ತಿಯಲ್ಲಿರುವ ನಿಯಮಗಳ ರೀತ್ಯ ಯೋಜನೆಗಳಿಂದ ನಿರ್ವಸಿತರಾದ (ಆದರೆ ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬ ಅಭ್ಯರ್ಥಿಗಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ). ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರ್‌ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು (ಈ ಪ್ರಮಾಣ ಪತ್ರದ ನಮೂನೆಯನ್ನು ನೇಮಕಾತಿ ಪ್ರಕಟಣೆಯ ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿದೆ).

**ಎಫ್)ಮಾಜಿ ಸೈನಿಕ ಅಭ್ಯರ್ಥಿ :**

ಮಾಜಿ ಸೈನಿಕ ಅಂದರೆ ಕೇಂದ್ರ ಸಶಸ್ತ್ರ ದಳಗಳಾದ ಭೂದಳ, ನೌಕಾದಳ ಮತ್ತು ವಾಯುದಳಗಳಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ.

ಅಂದರೆ:

ಎ) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ ವ್ಯಕ್ತಿ.

ಬಿ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಗೆ ಅನರ್ಹನಾದವ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಿಡುಗಡೆಯಾದ ವ್ಯಕ್ತಿ.

ಸಿ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಡಿ) ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆದಿರುವ ವ್ಯಕ್ತಿ.

ಇ) ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿ.

1. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು.
2. ಮಿಲಿಟರಿ ಸೇವೆಯಿಂದ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.
3. ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

**ವಿವರಣೆ:**

ಎ) ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಪುನರ್ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು

**ವ್ಯವಸ್ಥಾಪಕರು (ಆಡಳಿತ)**

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ.
ಕುಲಶೇಖರ, ಮಂಗಳೂರು – 575 005

ಅನುಮತಿ ನೀಡಲಾಗಿದ್ದರೂ ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ದಕ್ಷಿಣ ಕನ್ನಡ ಸಹಕಾರಿ ಹಾಲು ಒಕ್ಕೂಟದ ಹುದ್ದೆಗೆ ನೇಮಕ ಹೊಂದುವಂತಿಲ್ಲ.

ಬಿ) ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಪತ್ನಿ ಅಥವಾ ಪತಿ ಮತ್ತು ಮಕ್ಕಳು ಮತ್ತು ವಾರಸು ದಾರರು) ಮಾಜಿ ಸೈನಿಕ ಮೀಸಲಾತಿ ಪಡೆಯಲು ಅರ್ಹರಿರುತ್ತಾರೆ. ಆದರೆ ಅಂತಹವರುಗಳು ವಯೋಮಿತಿ ಸಡಿಲಿಕೆಯನ್ನು ಪಡೆಯಲು ಅರ್ಹರಿರುವುದಿಲ್ಲ.

4. ಶೈಕ್ಷಣಿಕ ವಿದ್ಯಾರ್ಹತೆ :

**ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಬಂಧಿಸಿದ ಹುದ್ದೆಗಳಿಗೆ ಸೂಚಿಸಿರುವ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು.**

ಪದವಿ ಎಂದರೆ ಅಭ್ಯರ್ಥಿಯು 10+2 ರ ವಿದ್ಯಾಭ್ಯಾಸದ ನಂತರ ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತ ವಾಗಿರುವ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ನಿಯತವಾಗಿ ಪಡೆದ **ಕನಿಷ್ಠ ಮೂರು ವರ್ಷಗಳ ಅವಧಿಯ ಸಾಂಪ್ರದಾಯಿಕ ಪದವಿ (10+2+3).**

**ಸ್ನಾತಕೋತ್ತರ ಪದವಿ** ಎಂದರೆ (10+2+3) ರ ವಿದ್ಯಾಭ್ಯಾಸದ ನಂತರ ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತ ವಾಗಿರುವ ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ನಿಯತವಾಗಿ ಪಡೆದ **ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ (10+2+3+2).**

**ಸೂಚನೆ:–** ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಮೇಲಿನ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ. ಆಯಾ ವಿಶ್ವವಿದ್ಯಾನಿಲಯಗಳಿಂದ ಪಡೆದ ಘಟಿಕೋತ್ಸವ ಪ್ರಮಾಣ ಪತ್ರವನ್ನು (Convocation Certificate) ಕಡ್ಡಾಯವಾಗಿ ಅಪ್‌ಲೋಡು ಮಾಡಬೇಕು. ಇಲ್ಲದಿದ್ದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಆಯಾ ಕಾಲೇಜುಗಳಿಂದ ನೀಡುವ ಘಟಿಕೋತ್ಸವ ಪ್ರಮಾಣಪತ್ರವನ್ನು ಪರಿಗಣಿಸಲಾಗುವುದಿಲ್ಲ. **2019–20ನೇ ಸಾಲಿನಲ್ಲಿ ಪದವಿ/ ಸ್ನಾತಕೋತ್ತರ ಪದವಿ ಅಥವಾ ಇನ್ನಾವುದೇ ವಿದ್ಯಾರ್ಹತೆಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಮಾತ್ರ ತಾತ್ಕಾಲಿಕ ಘಟಿಕೋತ್ಸವ ಪ್ರಮಾಣ ಪತ್ರ ಅಥವಾ ಅಂಕಪಟ್ಟಿಯನ್ನು ಪರಿಗಣಿಸಿ ಆನ್‌ಲೈನ್ ಅರ್ಜಿಯನ್ನು ಪುರಸ್ಕರಿಸಲಾಗುವುದು.**

**ಕನ್ನಡ ಭಾಷಾ ಜ್ಞಾನ (ಓದುವುದು ಮತ್ತು ಬರೆಯುವುದು) ಕಡ್ಡಾಯವಾಗಿರುತ್ತದೆ:** ಈ ಬಗ್ಗೆ ದಾಖಲಾತಿಯಾಗಿ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿ ಕನ್ನಡವನ್ನು ಪ್ರಥಮ /ದ್ವಿತೀಯ / ತೃತೀಯ ಭಾಷೆಯಾಗಿ ಕಲಿತಿರುವ ಬಗ್ಗೆ ದಾಖಲೆ ಇದ್ದಲ್ಲಿ ಸದರಿ ದಾಖಲಾತಿಯನ್ನು ಪರಿಗಣಿಸಲಾಗುವುದು. ಒಂದು ಪಕ್ಷ ಸದರಿ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರದಲ್ಲಿ ಕನ್ನಡ ಭಾಷೆ ಕಲಿತಿರುವ ಬಗ್ಗೆ ದಾಖಲೆ ಇಲ್ಲದಿದ್ದಲ್ಲಿ 1 ರಿಂದ 10 ನೇ ತರಗತಿಯ ವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತಿರುವ ಬಗ್ಗೆ ದಾಖಲೆಯನ್ನು ಲಗತ್ತಿಸುವುದು. (ಕನ್ನಡ ಮಾಧ್ಯಮ ಪ್ರಮಾಣಪತ್ರ)

ಅಭ್ಯರ್ಥಿಗಳು ಅವಶ್ಯವಿರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದೊಳಗೆ ನೇಮಕಾತಿ ಪ್ರಕಟಣೆಯ ಕೊನೆಯಲ್ಲಿ ನೀಡಲಾಗಿರುವ ನಮೂನೆಗಳಲ್ಲಿಯೇ ಪಡೆದು ಸಲ್ಲಿಸಬೇಕು.

ವ್ಯವಸ್ಥಾಪಕರು (ಆಡಳಿತ)

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ.
ಕುಲಶೇಖರ, ಮಂಗಳೂರು – 575 005

ಮೂಲವೇತನದೊಂದಿಗೆ ಒಕ್ಕೂಟದ ಸೇವಾ ನಿಯಮಗಳಲ್ಲಿ ಕಾಲಕಾಲಕ್ಕೆ ಲಭ್ಯವಿರುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ಇತರ ಭತ್ಯೆಗಳನ್ನು ಪಾವತಿಸಲಾಗುವುದು. ಭವಿಷ್ಯನಿಧಿ/ ಗ್ರಾಚ್ಯುಟಿ ಇತ್ಯಾದಿ ಶಾಸನಬದ್ಧ ಸೌಲಭ್ಯಗಳನ್ನು ನೀಡಲಾಗುವುದು.

ನೇಮಕಗೊಳ್ಳುವ ಅಭ್ಯರ್ಥಿಗಳನ್ನು ಒಕ್ಕೂಟದ ಕಾರ್ಯಕ್ಷೇತ್ರದ ಒಳಗೆ ಅಥವಾ ಹೊರಗೆ ಯಾವುದೇ ಘಟಕ/ಶಿಬಿರ ಕಛೇರಿ/ವಿಭಾಗ/ಶಾಖೆ/ಸ್ಥಳಗಳಲ್ಲಿ ಕರ್ತವ್ಯಕ್ಕೆ ನಿಯೋಜಿಸಬಹುದಾಗಿದೆ. ಸಹಾಯಕ ವ್ಯವಸ್ಥಾಪಕರು (ಎಹೆಚ್/ಎಐ) / ವಿಸ್ತರಣಾಧಿಕಾರಿ ದರ್ಜೆ–III ಮತ್ತು ಕಿರಿಯ ತಾಂತ್ರಿಕರು ಹುದ್ದೆಗಳಿಗೆ ನೇಮಕಗೊಳ್ಳುವ ಅಭ್ಯರ್ಥಿಗಳು ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕ ಪ್ರವಾಸವನ್ನು ಕೈಗೊಳ್ಳುವುದು ಕಡ್ಡಾಯವಾಗಿರುತ್ತದೆ. ತಾಂತ್ರಿಕ ಅಧಿಕಾರಿ(ಡಿ.ಟಿ.), ತಾಂತ್ರಿಕ ಅಧಿಕಾರಿ(ಪರಿಸರ), ತಾಂತ್ರಿಕ ಅಧಿಕಾರಿ(ಇಂಜಿನಿಯರಿಂಗ್) ಡೈರಿ ಸೂಪರ್‌ವೈಸರ್ ದರ್ಜೆ–II, ಆಡಳಿತ / ಮಾರುಕಟ್ಟೆ ಸಹಾಯಕರು ದರ್ಜೆ–II, ಕೆಮಿಸ್ಟ್ ದರ್ಜೆ– II ಮತ್ತು ಕಿರಿಯ ತಾಂತ್ರಿಕರು ಹುದ್ದೆಗಳಿಗೆ ನೇಮಕಗೊಳ್ಳುವ ಅಭ್ಯರ್ಥಿಗಳು ಕಾನೂನು ರೀತ್ಯಾ ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

**ಸಂಘಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮೀಸಲಿಟ್ಟ ಹುದ್ದೆಗಳಿಗೆ ಅಭ್ಯರ್ಥಿಗಳು ಈ ಪ್ರಕಟಣೆಯೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಅನುಭವ ಪತ್ರವನ್ನು ಸದರಿ ಸಂಘದ ಅಧ್ಯಕ್ಷರಿಂದ ಅಥವಾ ಆಡಳಿತಾಧಿಕಾರಿಯಿಂದ ಸೀಲು ಮತ್ತು ಸಹಿಯೊಂದಿಗೆ ದೃಢೀಕರಿಸಿ ತದನಂತರ ಸದರಿ ವಲಯಗಳ ಒಕ್ಕೂಟದ ಕ್ಷೇತ್ರಾಧಿಕಾರಿಗಳ ಅಥವಾ ಸಹಾಯಕ ವ್ಯವಸ್ಥಾಪಕರುಗಳಿಂದ ದೃಢೀಕರಿಸಿ ನಂತರ ಉಪ ವ್ಯವಸ್ಥಾಪಕರುಗಳ ಮೇಲು ರುಜುವಿನೊಂದಿಗೆ ದೃಢೀಕರಿಸಿ ಸದರಿ ಅನುಭವ ಪತ್ರವನ್ನು ಅಪ್‌ಲೋಡು ಮಾಡಬೇಕು. ಆಯ್ಕೆ ಸಂದರ್ಭದಲ್ಲಿ ಸದರಿ ಮೂಲ ಸೇವಾನುಭವ ದಾಖಲಾತಿಯನ್ನು ಹಾಜರುಪಡಿಸತಕ್ಕದ್ದು.**

5. ಶುಲ್ಕ:

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ I ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ರೂ.500/–(ಬ್ಯಾಂಕ್ ಶುಲ್ಕ ಪ್ರತ್ಯೇಕ) ಮತ್ತು ಇತರೆ ಅಭ್ಯರ್ಥಿಗಳಿಗೆ ರೂ.800/– (ಬ್ಯಾಂಕ್ ಶುಲ್ಕ ಪ್ರತ್ಯೇಕ)

- ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡಲು On-line ನಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೇ ಪಾಲಿಸುವುದು.
- ತಪ್ಪು ಮಾಹಿತಿಗಳನ್ನು ಮತ್ತು ಅಸ್ಪಷ್ಟ ಮಾಹಿತಿ ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ಅರ್ಜಿಯನ್ನು ಯಾವುದೇ ಮಾಹಿತಿ ನೀಡದೆ ತಿರಸ್ಕರಿಸಲಾಗುವುದು.
- ಅರ್ಜಿ ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳು ತಿರಸ್ಕೃತಗೊಳ್ಳುವುದು.
- ಅಭ್ಯರ್ಥಿಗಳೂ ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.
- ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ೨೧.೦೫.೨೦೨೧ ರ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಡಿಡಿ/ಚೆಕ್/ಪೋಸ್ಟಲ್ ಆರ್ಡರ್ / ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ವ್ಯವಸ್ಥಾಪಕರು (ಆಡಳಿತ)

ವ್ಯವಸ್ಥಾಪಕ ನಿರ್ದೇಶಕರು
ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ.
ಕುಲಶೇಖರ, ಮಂಗಳೂರು – 575 005

- ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಒಕ್ಕೂಟವು ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
- ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೆ ಯಾವುದೇ ನೇಮಕಾತಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
- ಅರ್ಜಿಗಳನ್ನು ಭರ್ತಿ ಮಾಡಲು ಮತ್ತು ಶುಲ್ಕ ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ, ಆ ಮುಂದಿನ ಕೆಲಸದ ದಿನವು ಅರ್ಜಿಗಳನ್ನು ಭರ್ತಿ ಮಾಡಲು ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕವಾಗುವುದು.

1. **ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಪ್ರಾರಂಭಿಕ ದಿನಾಂಕ :28–04–2021**
2. **ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ :28–05–2021**
3. **ಆನ್‌ಲೈನ್ ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ** : 29–05–2021 . 5.30 pm

**6. ಸಾಮಾನ್ಯ ನಿಬಂಧನೆಗಳು:**

ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ನೇಮಕಾತಿ ಪ್ರಕಟಣೆಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಹೊಂದಿರಲೇಬೇಕು. ಒಕ್ಕೂಟದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊರತುಪಡಿಸಿ ಇತರೆ ಯಾವುದೇ ಸಮಾನಾಂತರ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ.

ಎಸ್.ಎಸ್.ಎಲ್.ಸಿ. ಅಥವಾ ಇದಕ್ಕೆ ತತ್ಸಮವೆಂದು ರಾಜ್ಯ ಸರ್ಕಾರದಿಂದ ಘೋಷಿಸಲ್ಪಟ್ಟ ಇತರೆ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಅಥವಾ ಐಚ್ಛಿಕ ವಿಷಯವಾಗಿ ಕಡ್ಡಾಯವಾಗಿ ವ್ಯಾಸಂಗ ಮಾಡಿರತಕ್ಕದ್ದು.

ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಪರೀಕ್ಷಾವಧಿ ಸರ್ಕಾರ/ಒಕ್ಕೂಟ ನಿಗದಿಪಡಿಸಿದಂತೆ ಇರುತ್ತದೆ. ಅವಶ್ಯವಿದ್ದಲ್ಲಿ ಪರೀಕ್ಷಾವಧಿಯನ್ನು ವಿಸ್ತರಿಸಲಾಗುವುದು. ಪರೀಕ್ಷಾವಧಿಯಲ್ಲಿ ಅಭ್ಯರ್ಥಿಗಳ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಅಂತಹವರ ಸೇವೆಯನ್ನು ಖಾಯಂಗೊಳಿಸಲಾಗುವುದು.

ಅರ್ಜಿಯಲ್ಲಿ ನಮೂದಿಸಿದ ಅಂಕಪಟ್ಟಿ / ಇತರೆ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ **ಯಾವುದೇ ಹಂತದಲ್ಲಿ ಹಿಂದಕ್ಕೆ ಪಡೆಯುವ / ರದ್ದುಪಡಿಸುವ ಅಧಿಕಾರವನ್ನು ಒಕ್ಕೂಟವು ಹೊಂದಿರುತ್ತದೆ.** ಅಭ್ಯರ್ಥಿಗಳು ಆಯ್ಕೆಯಾದ ನಂತರ ಸಲ್ಲಿಸಿರುವ ದಾಖಲಾತಿಗಳ ನೈಜತೆಯನ್ನು ಸಂಬಂಧಪಟ್ಟ ಸಂಸ್ಥೆ/ಪ್ರಾಧಿಕಾರ/ವಿಶ್ವವಿದ್ಯಾನಿಲಯಗಳಿಂದ ದೃಢೀಕರಿಸಿಕೊಂಡು ನೇಮಕಾತಿ ಆದೇಶ ಹೊರಡಿಸುವ ಹಕ್ಕನ್ನು ಒಕ್ಕೂಟವು ಕಾಯ್ದಿರಿಸಿಕೊಂಡಿದೆ.

